## ದಿನಾಂಕ 20-01-2009ರಂದು ಜರುಗಿದ "Sensitive Zone" ಎಂದು ವರ್ಗೀಕರಿಸಿರುವ ಉಪ ಸಮಿತಿ ಸಭೆಯ ನಡವಳಿ.

**ಹಾಜರಿದ್ದ ಸದಸ್ಯರುಗಳುಃ-**

1. ಶ್ರೀ ಸಿದ್ದಯ್ಯ, IAS, ಅಧ್ಯಕ್ಷರು ಉಪಸಮಿತಿ ಹಾಗೂ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ನಗರ ಯೋಜನಾ ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರ ಪರವಾಗಿ ಶ್ರೀ ಎನ್.ಕೆ. ತಿಪ್ಪೆಸ್ವಾಮಿ, ಜಂಟಿ ನಿರ್ದೇಶಕರು, ನಗರ ಯೋಜನಾ ಇಲಾಖೆ.
3. ಶ್ರೀ ಎಸ್.ಬಿ. ಹೊನ್ನೂರ್, ಹೆಚ್ಚುವರಿ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
4. ಶ್ರೀ ಬಿ.ಎಂ. ತಿರುಕನಗೌಡರ್, ಜಂಟಿ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಬೆಂಗಳೂರು.
5. ಶ್ರೀ ಟಿ.ಡಿ. ನಂಜುಂಡಪ್ಪ , ಅಭಿಯಂತರ ಸದಸ್ಯರು (ಪ್ರಭಾರ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
6. ಶ್ರೀ ರಾಯಪ್ಪ, ಮುಖ್ಯ ಅಭಿಯಂತರರು, BBMP (Incharge of Storm Water Drain), ಬೆಂಗಳೂರು. 9900906313
7. ಪ್ರೊ॥ ಎಂ.ಎಸ್. ಮೋಹನ್ ಕುಮಾರ್, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು.
8. ಪ್ರೊ॥ ಕೆ. ಶ್ರೀಧರನ್, ಹೈಡ್ರಾಲಜಿ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು.
9. ಶ್ರೀ ಎ.ವಿ. ರಂಗೇಶ್, ಸಂಚಾಲಕರು ಹಾಗೂ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.

ದಿನಾಂಕ 20-01-2009 ರಂದು ಪರಿಷ್ಕೃತ ಮಾಸ್ಟರ್ ಪ್ಲಾನ್ – 2015ರಲ್ಲಿ "Sensitive Zone" ಎಂದು ವರ್ಗೀಕರಿಸಿರುವ ಪ್ರದೇಶದಲ್ಲಿ ಅಭಿವೃದ್ಧಿಗಳಿಗೆ ಅನುಮತಿ ನೀಡುವ ಸಂಬಂಧ ಉಪ ಸಮಿತಿಯನ್ನು ರಚಿಸಿದ್ದು, ಮೊದಲನೆಯ ಉಪಸಮಿತಿಯ ಸಭೆಗೆ ಅಧ್ಯಕ್ಷರು ಎಲ್ಲರನ್ನು ಸ್ವಾಗತ ಕೋರಿದರು ಉಪ ಸಮಿತಿ ರಚಿಸಿರುವ ಉದ್ದೇಶ ಹಾಗೂ ಅದರ ಕಾರ್ಯವ್ಯಾಪ್ತಿಯ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಉಪಸಮಿತಿಯಲ್ಲಿ ಸದಸ್ಯರಾಗಿರುವ ಪ್ರೊ॥ ಶ್ರೀಧರನ್ ಮತ್ತು ಪ್ರೊ॥ ಮೋಹನ್ ಕುಮಾರ್ ಇವರುಗಳಿಗೆ ಸರ್ಕಾರದಿಂದ ದಿನಾಂಕ 25-06-2007 ರಂದು ಅನುಮೋದನೆಯಾಗಿರುವ RMP-2015 ರ ಬಗ್ಗೆ ಹಾಗೂ ಅದರಲ್ಲಿ ಸೂಚಿಸಿರುವ Valley Zone, Buffer ಹಾಗೂ Sensitive ಪ್ರದೇಶಗಳ ಬಗ್ಗೆ ವಿವರಿಸಲಾಯಿತು. ಹಾಗೂ Sensitive Zone ಉಪ ಸಮಿತಿಯನ್ನು ರಚಿಸಿರುವ ಬಗ್ಗೆ ಹಾಗೂ ಅದರ ಕಾರ್ಯ ವ್ಯಾಪ್ತಿಯ ಬಗ್ಗೆ ಮನವರಿಕೆ ಮಾಡಿಕೊಡಲಾಯಿತು. ತದನಂತರ ಕಾರ್ಯ ಸೂಚಿಯಲ್ಲಿ ಸೂಚಿಸಿರುವಂತೆ ಒಂದೊಂದಾಗಿ ವಿಷಯವನ್ನು ಚರ್ಚಿಸಲಾಯಿತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಇವರಿಂದ ಯಾರು ಪ್ರತಿನಿಧಿಸಿಲ್ಲವಾದ್ದರಿಂದ, ಮುಖ್ಯ ಅಭಿಯಂತರರು, BWSSB, ಇವರನ್ನು ಇನ್ನು ಮುಂದೆ ಪ್ರತಿ ಸಭೆಗೆ ಆಹ್ವಾನಿಸಲು ಉಪ ಸಮಿತಿಯಲ್ಲಿ ತೀರ್ಮಾನಿಸಲಾಯಿತು. ಹಾಗೂ M/s Sky Group ನ ಪ್ರತಿನಿಧಿಯಾಗಿ ಶ್ರೀ ಆಕಾಶ್‌ರವರನ್ನು ಸಭೆಗೆ ಆಹ್ವಾನಿಸಲು ಸಹ ತೀರ್ಮಾನಿಸಲಾಯಿತು.

| ವಿಷಯ ಸಂಖ್ಯೆ | ವಿಷಯ | **Revised Master Plan-2015** ರಂತೆ ವರ್ಗೀಕರಣ **(Sensitive** ಭಾಗಶಃ**)** | ಉಪಸಮಿತಿ ಸಭೆಯ ತೀರ್ಮಾನ |
|---|---|---|---|
| 01 | ಬೆಂಗಳೂರು ಪೂರ್ವ ತಾಲ್ಲೂಕು , ವರ್ತೂರು ಹೋಬಳಿ, ಹಾಲನಾಯಕನಹಳ್ಳಿ ಗ್ರಾಮ ಸರ್ವೆ ಸಂಖ್ಯೆ:57/1,2 ರಲ್ಲಿನ 02ಎ- 11ಗುಂಟೆ ಪ್ರದೇಶಕ್ಕೆ ಕಟ್ಟಡ ನಕ್ಷೆ ಅನುಮೋದನೆಯನ್ನು ಶ್ರೀ ಎಸ್.ವಿ.ರೆಡ್ಡಿರವರ ಪರವಾಗಿ ನೀಡುವ ಬಗ್ಗೆ . | Industrial (Hitech) | Data Sheet to be made available |
| 02 | ಬಿದರಹಳ್ಳಿ ಹೋಬಳಿ, ಶೀಗೇಹಳ್ಳಿ ಗ್ರಾಮದ ಸಸಂ.101/10 ರಲ್ಲಿನ 0ಎ-08 ಗುಂಟೆ ಪ್ರದೇಶದಲ್ಲಿ ಪೆಟ್ರೋಲ್ ಬಂಕ್ ಸ್ಥಾಪಿಸಲು ಅನುಮತಿಯನ್ನು ಶ್ರೀ. ಮಂಜುನಾಥ್ ವಿ ರವರ ಪರವಾಗಿ ನೀಡುವ ಬಗ್ಗೆ. | Mutation Corridor | Data Sheet to be made available |
| 03 | ಕೆ.ಆರ್.ಪುರಂ ಹೋಬಳಿ, ಸಾದರಮಂಗಲ ಗ್ರಾಮದ ಸಸಂ:69/1 ರಲ್ಲಿನ 02ಎ-34 ಗುಂಟೆ ಪ್ರದೇಶಕ್ಕೆ ಏಕ ನಿವೇಶನ ವಸತಿ ಬಡಾವಣೆ ಅನುಮೋದನೆಯನ್ನು ಶ್ರೀ ಸುಬ್ರಮಣ್ಯರವರ ಪರವಾಗಿ ನೀಡುವ ಬಗ್ಗೆ. | Residential (Main) | Data Sheet to be made available |
| 04 | ಬೆಂಗಳೂರು ದಕ್ಷಿಣ ತಾಲ್ಲೂಕು , ಕೆಂಗೇರಿ ಹೋಬಳಿ, ಪಟ್ಟಣಗೆರೆ ಸ.ಸಂ.53/2 ರಲ್ಲಿನ 2ಎ-05 ಗುಂಟೆ ಪ್ರದೇಶಕ್ಕೆ ಭೂ ಪರಿವರ್ತನಾ ಆದೇಶದ ಸಂಬಂಧ ತಾತ್ಕಾಲಿಕ ಏಕನಿವೇಶನ ವಸತಿ ಬಡಾವಣೆ ನಕ್ಷೆಯನ್ನು ಶ್ರೀ. ಜಿ.ಆರ್. ಬೈರೇಶ್‌ರವರ ಪರವಾಗಿ ಅನುಮೋದನೆ ನೀಡುವ ಬಗ್ಗೆ. | Residential (Main) | **Inspection** |
| 05 | ಬೆಂಗಳೂರು ದಕ್ಷಿಣ ತಾಲ್ಲೂಕು , ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಸ.ಸಂ.48/4A ರಲ್ಲಿನ 02ಎ-30ಗುಂಟೆ ಪ್ರದೇಶಕ್ಕೆ ಕಟ್ಟಡ ನಕ್ಷೆ ಅನುಮೋದನೆಯನ್ನು ಮೆ॥ ಮೆಸ್ಸೈ ಇನ್‌ವೆಸ್ಟ್‌ಮೆಂಟ್ಸ್ ಪ್ರೈ.ಲಿ. ರವರ ಪರವಾಗಿ ಅನುಮೋದಿಸುವ ಬಗ್ಗೆ . | Residential (Main) | **Inspection** |

| | | | |
|---|---|---|---|
| 06 | ಬೆಂಗಳೂರು ದಕ್ಷಿಣ ತಾಲ್ಲೂಕು , ಕೆಂಗೇರಿ ಹೋಬಳಿ, ಪಟ್ಟಣಗೆರೆ ಸ.ಸಂ. 29(P) , 31 ರಲ್ಲಿನ 09ಎ -28ಗುಂಟೆ ಪ್ರದೇಶಕ್ಕೆ ಅಭಿವೃದ್ಧಿ ನಕ್ಷೆಯನ್ನು ಮೆ॥ ಟ್ಯಾಂಗ್ಲಿನ್ ಡೆವಲಪರ್ಸ್ ರವರ ಪರವಾಗಿ ಅನುಮೋದಿಸುವ ಬಗ್ಗೆ . | Industrial | Data Sheet to be made available |
| 07 | ಬೆಂಗಳೂರು ದಕ್ಷಿಣ ತಾಲ್ಲೂಕು , ಬೇಗೂರು ಹೋಬಳಿ,ಬಸಾಪುರ ಗ್ರಾಮದ ಸ.ಸಂ.50 ರಲ್ಲಿನ 01ಎ 30 ಗುಂಟೆ ಪ್ರದೇಶಕ್ಕೆ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆಯನ್ನು ಶ್ರೀ ರಾಮಚಂದ್ರ ರೆಡ್ಡಿ ಎಂ.ರವರ ಪರವಾಗಿ ಅನುಮೋದಿಸುವ ಬಗ್ಗೆ . | Residential (Main) | Data Sheet to be made available |
| 08 | ಬೆಂಗಳೂರು ಉತ್ತರ ತಾಲ್ಲೂಕು ,ಯಲಹಂಕ ಹೋಬಳಿ , ಯಲಹಂಕ ಗ್ರಾಮದ ಸ.ಸಂ.62, 67 ಇನ್ನಿತರೇ ಮತ್ತು ಯಲಹಂಕ ಅಮಾನಿಕೆರೆ ಗ್ರಾಮದ ಸ.ಸಂ.18/1,2,20 ಇನ್ನಿತರೇ ಸ.ಸಂಖ್ಯೆಗಳಲ್ಲಿ 23ಎಕರೆ 07 ಗುಂಟೆ ಪ್ರದೇಶಕ್ಕೆ ಮೆ॥ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ಸ್ ಮತ್ತು ಶ್ರೀ ದಯಾನಂದ ಪೈ ರವರ ಪರವಾಗಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸುವ ಬಗ್ಗೆ . | Residential (Main) & Valley | Inspection |
| 09 | ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ಸೋಮಶೆಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 74ರಲ್ಲಿನ 02ಎ – 20 ಗುಂಟೆ ಪ್ರದೇಶಕ್ಕೆ ಶ್ರೀ. ವಾಸುದೇವ ಮೂರ್ತಿಯವರ ಪರವಾಗಿ ವಸತಿ ಕಟ್ಟಡ ನಕ್ಷೆ ಅನುಮೋದಿಸುವ ಬಗ್ಗೆ. | Residential (Main) | **Inspection** |
| 10 | ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ರಾಮಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 54/2 ರಲ್ಲಿನ 02 ಎಕರೆ ಪ್ರದೇಶಕ್ಕೆ ಶ್ರೀ. ಬಾಲಾಜಿ ಎಜುಕೇಷನಲ್ ಟ್ರಸ್ಟ್ ಪರವಾಗಿ ಶಾಲಾ ಕಟ್ಟಡ ನಕ್ಷೆ ಅನುಮೋದಿಸುವ ಬಗ್ಗೆ. | Residential (Main) | Inspection |

| | | | |
|---|---|---|---|
| 11 | ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಅಟ್ಟೂರು ಗ್ರಾಮದ ಸರ್ವೆ ನಂ.68, 69/1, 69/2, 71/1,2, ರಲ್ಲಿನ 15ಎ - 33¼ ಗುಂಟೆ ಪ್ರದೇಶಕ್ಕೆ ಶ್ರೀ. ರಾಮಕೃಷ್ಣ.ಎ. ಮತ್ತು ಶ್ರೀ. ಎಂ. ಎಸ್. ಮಹದೇವಯ್ಯನವರ ಪರವಾಗಿ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆ ಅನುಮೋದನೆ ನೀಡುವ ಬಗ್ಗೆ. | Residential (Main) ಮತ್ತು Valley | Inspection |
| 12 | ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಸೂಲಿಕೆರೆ ಗ್ರಾಮದ ಸರ್ವೆ ನಂ.04 ರಲ್ಲಿನ 03ಎ - 14 ಗುಂಟೆ ಪ್ರದೇಶಕ್ಕೆ ಕೈಗಾರಿಕೆಯಿಂದ ವಸತಿಗಾಗಿ ಭೂ ಉಪಯೋಗ ಬದಲಾವಣೆಯನ್ನು ಶ್ರೀಮತಿ ಪುಟ್ಟಲಕ್ಷಮ್ಮನವರ ಪರವಾಗಿ ಅನುಮೋದಿಸುವ ಬಗ್ಗೆ. | Industrial (Hi-tech) | Inspection |
| 13 | ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಆವಲಹಳ್ಳಿ ಗ್ರಾಮದ ಸರ್ವೆ ನಂ.95/2P, 116 ಇನ್ನಿತರ ಸರ್ವೆ ಸಂಖ್ಯೆ ಗಳಲ್ಲಿನ 37ಎ-03½ ಪ್ರದೇಶಕ್ಕೆ BEL ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಪರವಾಗಿ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸುವ ಬಗ್ಗೆ. | Residential Main | Inspection |
| 14 | ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಹರಳೂರು ಗ್ರಾಮದ ಸರ್ವೆ ನಂ. 14/1 ರಿಂದ 4, 17/12, ಇನ್ನಿತರೆ ಸರ್ವೆ ನಂ.ಗಳಲ್ಲಿನ 15ಎಕರೆ ಪ್ರದೇಶಕ್ಕೆ ದಿವ್ಯಶ್ರೀ ರಿಯಲ್‌ಬರ್ಸ್ (ಬೆಂಗಳೂರು) ಪ್ರೈ ಲಿ.ನವರ ಪರವಾಗಿ ವಸತಿ ಅಭಿವೃದ್ಧಿ ನಕ್ಷೆಯನ್ನು ಅನುಮೋದಿಸುವ ಬಗ್ಗೆ. | Industrial (Hitech) | Data Sheet to be made available |

| | | | |
|---|---|---|---|
| 15 | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಇಬ್ಬಲೂರು ಗ್ರಾಮದ ಸರ್ವೆ ನಂ. 6/1, 8/1,2,3, 9/1,3, 10/2, 11/2 ರಲ್ಲಿನ 14ಎ - 29 ಗುಂಟೆ ವಿಸ್ತೀರ್ಣಕ್ಕೆ ಮೆ॥ ಡೈನಸ್ಟಿ ಡೆವಲಪರ್ಸ್ ಪ್ರೈ. ಲಿ.ನವರ ಪರವಾಗಿ ಅಭಿವೃದ್ಧಿ ನಕ್ಷೆ ಅನುಮೋದನೆ ನೀಡುವ ಬಗ್ಗೆ. | Residential Main | Data Sheet to be made available |
| 16 | ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹೊರಮಾವು ಗ್ರಾಮದ ಸರ್ವೆ ನಂ. 38/1ಎ, 38/1ಬಿ ರಲ್ಲಿನ 36¾ ಗುಂಟೆ ಜಮೀನಿಗೆ ತಾತ್ಕಾಲಿಕ ವಸತಿ ಬಡಾವಣೆ ನಕ್ಷೆ ಅನುಮೋದಿಸುವ ಬಗ್ಗೆ. | Residential Main | Data Sheet to be made available |
| 17 | ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭೈರತಿ ಗ್ರಾಮದ ಸರ್ವೆ ನಂ. 57/2,3, ಇನ್ನಿತರೇ ಸರ್ವೆ ನಂ.ಗಳಲ್ಲಿನ 34 ಎಕರೆ ಪ್ರದೇಶಕ್ಕೆ ಕನಕ ಶ್ರೀ. ಗುರುನರಸಿಂಹ ಗೃಹ ನಿರ್ಮಾಣ ಸಹಕಾರ ಸಂಘ(ನಿ)ರವರ ಪರವಾಗಿ ವಸತಿ ಬಡಾವಣೆ ನಕ್ಷೆ ಅನುಮೋದಿಸುವ ಬಗ್ಗೆ. | Residential Main | Data Sheet to be made available |
| 18 | ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೇವರಬೀಸನಹಳ್ಳಿ ಗ್ರಾಮದ ಸರ್ವೆ ನಂ. 49, 38ರಲ್ಲಿನ 07 ಎಕರೆ - 02 ಗುಂಟೆ ಪ್ರದೇಶಕ್ಕೆ ಶ್ರೀ. ರಾಜೇಂದ್ರ ಕುಮಾರ್ ಮತ್ತು ಶ್ರೀ. ಶಂಕರ ನಾರಾಯಣರವರ ಪರವಾಗಿ ಕೈಗಾರಿಕೆ (Hitech) ನಿಂದ ವಸತಿಗೆ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ. | Partly Industry (Hitech) ಮತ್ತು Partly Valley | Data Sheet to be made available |
| 19 | ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಚಿಕ್ಕಬೆಳ್ಳಂದೂರು ಗ್ರಾಮದ ಸರ್ವೆ ನಂ. 20/1,2,3, 22 ಮತ್ತು 23 ರಲ್ಲಿನ 16 ಎಕರೆ 09 ಗುಂಟೆ ಪ್ರದೇಶಕ್ಕೆ ಶ್ರೀ. ಗೋವಿಂದಚಾರಿ ಮತ್ತಿತರರ ಪರವಾಗಿ ಅಭಿವೃದ್ಧಿ ನಕ್ಷೆ ಅನುಮೋದನೆ ನೀಡುವ ಬಗ್ಗೆ. | Residential Main | Data Sheet to be made available |

| | | | |
|---|---|---|---|
| 20 | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂ. 48/6,7,8 ರಲ್ಲಿನ 01 ಎಕರೆ – 01 ಗುಂಟೆ ವಿಸ್ತೀರ್ಣಕ್ಕೆ ಶ್ರೀಮತಿ ಗೌರಮ್ಮ ಕೋಂ ಶ್ರೀ. ಡಿ.ಕೆ. ಕೆಂಪೇಗೌಡರವರ ಪರವಾಗಿ ತಾತ್ಕಾಲಿಕ ಏಕ ನಿವೇಶನ ವಸತಿ ಬಡಾವಣೆ ನಕ್ಷೆ ಅನುಮೋದನೆ ನೀಡುವ ಬಗ್ಗೆ. | Residential Main | Data Sheet to be made available |
| 21 | ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಕೋಡಿಗೆಹಳ್ಳಿ ಗ್ರಾಮದ ಸರ್ವೆ ನಂ. 159 ಮತ್ತು 160 ರಲ್ಲಿನ 3ಎ- 08 ಗುಂಟೆ ಪ್ರದೇಶದಲ್ಲಿ ಶ್ರೀ. ಕೆ. ಮರಿಯಪ್ಪ ಇವರ ಪರವಾಗಿ ಕಟ್ಟಡ ನಕ್ಷೆ ಅನುಮೋದನೆ ಕೋರಿರುವ ಬಗ್ಗೆ. | Residential Main (Partly Sensitive). | Inspection |
| 22 | ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಸರ್ವೆ ನಂ.241, 256/2 ರಲ್ಲಿನ 4ಎ – 18 ಗುಂಟೆ ವಿಸ್ತೀರ್ಣಕ್ಕೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡುವ ಬಗ್ಗೆ ಅಭಿಪ್ರಾಯ ನೀಡುವ ಸಂಬಂಧ. | Residential Main | Data Sheet to be made available |

ಸರ್ಕಾರದಿಂದ ಅನುಮೋದನೆ ಆಗಿರುವ RMP-2015 ರ ವಲಯ ನಿಯಮಾವಳಿಯಲ್ಲಿ Sensitive Zone ರ ಬಗ್ಗೆ ವಿವರವಾದ Guide Lines ಇಲ್ಲದಿರುವುದರಿಂದ ಇದರ ಬಗ್ಗೆ ವಿವರವಾದ Guide Lines ಅನ್ನು ತಯಾರಿಸಲು ಪ್ರೊ।। ಶ್ರೀಧರನ್ ಮತ್ತು ಪ್ರೊ।। ಮೋಹನ್ ಕುಮಾರ್‌ರವರನ್ನು ಕೋರಲಾಯಿತು. ಹಾಗೂ ಕಾರ್ಯ ಸೂಚಿಯಲ್ಲಿ ತಿಳಿಸಿರುವಂತೆ ಸ್ಥಳ ಪರಿಶೀಲನೆ ನಡೆಸಲು ಈ ಕೆಳಕಂಡ ಸದಸ್ಯರುಗಳ ತಂಡವನ್ನು ರಚಿಸಲಾಯಿತು.

1. ಪ್ರೊ।। ಕೆ. ಶ್ರೀಧರನ್
2. ಪ್ರೊ।। ಎಂ.ಎನ್. ಮೋಹನ್ ಕುಮಾರ್
3. ನಿರ್ದೇಶಕರು, ನಗರ ಯೋಜನಾ ಇಲಾಖೆ
4. ನಗರ ಯೋಜಕ ಸದಸ್ಯರು.
5. ಮುಖ್ಯ ಅಭಿಯಂತರರು BBMP, (Incharge of Storm Water Drain).
6. ಶ್ರೀ ಆಕಾಶ್, M/s Sky Group.

ಹಾಗೂ ದಿನಾಂಕ 24-01-2009 ರಂದು ಬೆಳಗೆ 9-00 ಘಂಟೆಗೆ ಸ್ಥಳ ವೀಕ್ಷಣೆ ನಡೆಸಲು ತೀರ್ಮಾನಿಸಲಾಯಿತು. ಮುಂದಿನ ಉಪ ಸಮಿತಿ ಸಭೆಯನ್ನು ದಿನಾಂಕ 30-01-2009 ರಂದು ನಡೆಸಲು ತೀರ್ಮಾನಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/1
ಸಂಚಾಲಕರು,
ಉಪಸಮಿತಿ ಸಭೆ ಹಾಗೂ
ನಗರ ಯೋಜಕ ಸದಸ್ಯರು,
ಬೆಂಅಪ್ರಾ, ಬೆಂಗಳೂರು.

22.1.09.
ಅಧ್ಯಕ್ಷರು,
ಉಪಸಮಿತಿ ಸಭೆ ಹಾಗೂ
ಆಯುಕ್ತರು,
ಬೆಂಅಪ್ರಾ, ಬೆಂಗಳೂರು

## ದಿನಾಂಕ 31-01-2009ರಂದು ಜರುಗಿದ "Sensitive Zone" ಎಂದು ವರ್ಗೀಕರಿಸಿರುವ ಉಪ ಸಮಿತಿ ಸಭೆಯ ನಡವಳಿ.

**ಹಾಜರಿದ್ದ ಸದಸ್ಯರುಗಳು:-**

1. ಶ್ರೀ ಸಿದ್ದಯ್ಯ, IAS, ಅಧ್ಯಕ್ಷರು ಉಪಸಮಿತಿ ಹಾಗೂ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ನಗರ ಯೋಜನಾ ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರ ಪರವಾಗಿ ಶ್ರೀ ಎನ್.ಕೆ. ತಿಪ್ಪೆಸ್ವಾಮಿ, ಜಂಟಿ ನಿರ್ದೇಶಕರು, ನಗರ ಯೋಜನಾ ಇಲಾಖೆ.
3. ಶ್ರೀ ಬಿ.ಎಂ. ತಿರುಕನಗೌಡರ್, ಜಂಟಿ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. ಬೆಂಗಳೂರು.
4. ಶ್ರೀ ರಾಯಪ್ಪ, ಮುಖ್ಯ ಅಭಿಯಂತರರು, BBMP (Incharge of Storm Water Drain), ಬೆಂಗಳೂರು.
5. ಪ್ರೊ|| ಎಂ.ಎಸ್. ಮೋಹನ್ ಕುಮಾರ್, ಸಿವಿಲ್ ಇಂಜಿನಿಯರಿಂಗ್ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು.
6. ಪ್ರೊ|| ಕೆ. ಶ್ರೀಧರನ್, ಹೈಡ್ರಾಲಜಿ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು.
7. ಶ್ರೀ ಎ.ವಿ. ರಂಗೇಶ್, ಸಂಚಾಲಕರು ಹಾಗೂ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.
8. ಶ್ರೀ ಆಕಾಶ್, M/S. Sky Group, ಬೆಂಗಳೂರು.

**ಗೈರುಹಾಜರಿದ್ದ ಸದಸ್ಯರುಗಳು:-**

1. ಶ್ರೀ ಎಸ್.ಬಿ. ಹೊನ್ನೂರ್, ಹೆಚ್ಚುವರಿ ನಿರ್ದೇಶಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ಶ್ರೀ ಟಿ.ಡಿ. ನಂಜುಂಡಪ್ಪ , ಅಭಿಯಂತರ ಸದಸ್ಯರು (ಪ್ರಭಾರ), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
3. ಆಹ್ವಾನಿತರು : ಮುಖ್ಯ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು.

ದಿನಾಂಕ 20-01-2009 ರಂದು ಜರುಗಿದ ಉಪಸಮಿತಿ ಸಭೆಯ ನಡವಳಿಯಂತೆ "Sensitive Zone" ನಲ್ಲಿ ಬರುವ ಪ್ರದೇಶಗಳಿಗೆ ವಿವರವಾದ Guidelines ಅನ್ನು ತಯಾರಿಸಲು ಪ್ರೊ|| ಮೋಹನ್‌ಕುಮಾರ್ ಮತ್ತು ಪ್ರೊ| ಕೆ. ಶ್ರೀಧರನ್ ರವರಿಗೆ ಕೋರಲಾಗಿತ್ತು, ಹಾಗೂ Sensitive Zone ನಲ್ಲಿ ಬರುವ ಪ್ರಕರಣಗಳನ್ನು ವೀಕ್ಷಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ತಂಡವನ್ನು ರಚಿಸಲಾಗಿತ್ತು.

1. ಪ್ರೊ|| ಕೆ. ಶ್ರೀಧರನ್
2. ಪ್ರೊ|| ಎಂ.ಎಸ್. ಮೋಹನ್ ಕುಮಾರ್
3. ನಿರ್ದೇಶಕರು, ನಗರ ಯೋಜನಾ ಇಲಾಖೆ
4. ನಗರ ಯೋಜಕ ಸದಸ್ಯರು, ಬೆಂಅಪ್ರಾ,
5. ಮುಖ್ಯ ಅಭಿಯಂತರರು BBMP, (Incharge of Storm Water Drain).
6. ಶ್ರೀ ಆಕಾಶ್, M/s Sky Group.

ಸದರಿ ತಂಡದವರು ದಿನಾಂಕ 24.01.2009 ರಂದು Sensitive Zone ನಲ್ಲಿ ಬರುವ ಕೆಲವು ಜಾಗಗಳನ್ನು ಸ್ಥಳ ಪರಿಶೀಲನೆ ನಡೆಸಿರುತ್ತಾರೆ ಹಾಗೂ ಪ್ರೊ|| ಮೋಹನ್ ಕುಮಾರ್ ಮತ್ತು ಪ್ರೊ|| ಕೆ. ಶ್ರೀಧರನ್‌ರವರು Sensitive Zone ಗೆ ಸಂಬಂಧಿಸಿದಂತೆ Guideline ಗಳನ್ನು ತಯಾರಿಸಿ, ದಿನಾಂಕ 29.01.2009 ರಂದು ಉಪಸಮಿತಿಯ ಸದಸ್ಯರುಗಳ ತಂಡದ ಮುಂದೆ ಮಂಡಿಸಿದರು. ಈ ಬಗ್ಗೆ ಚರ್ಚೆ ನಡೆದು Guide lines ಗಳನ್ನು ದಿನಾಂಕ 31.01.2009 ರಂದು ಜರುಗಿದ ಉಪಸಮಿತಿಯ ಸಭೆಯಲ್ಲಿ ಚರ್ಚಿಸಿ, ಈ ಕೆಳಕಂಡಂತೆ Guidelines ನ ನಮೂನೆಯನ್ನು ಮಾಡಲಾಗಿದೆ.

1. The buffer zone provided for primary, secondary and tertiary valley are adequately conservative and hence, in priniciple, it is possible to adopt a fairly liberal approach in permitting development in sensitive areas, as the valley with buffer zone is, in any case, not permitted for development. However, there may be exceptional situations where greater caution may be necessary.

**Discussion & Suggestion:**

The team has identified the following valley as primary valley.

i. Vrushabhavathi (ii) Challaghatta & Koramangala (iii) Hebbal (iv) Arkavathi (v) Dakshina Pinakini. The team has also suggested to redefine the buffer zone for tertiary drain (15 m on each side) Buffer zone for primary is totally 100 mts. This should be decided with respect to the sital condition & level i.e. reservation of buffer zone on either side of drain and same is applicable in secondary drain also i.e. 50 mtrs.

ii. It was decided to amend the width of drain as already prescribed in the ZR.

2. There may be cases where the valley is on the boundary of the sensitive area. In such cases, it is possible to construct internal drainage in the sensitive area, leading upto the valley. With provision of such internal drainage, development may be permitted.

   i. Sufficient provision for flow of water is to be provided.
   ii. Internal drainage system should be properly designed.

3. There may be cases where the valley may run in the middle of sensitive area. In such cases, internal drainage leading upto the valley has to be constructed on both sides of the valley. With provision of such internal drainage, development may be permitted.

4. There are cases where the valley does not fall in the sensitive area. In such cases, internal drainage which may be constructed in the sensitive area has to be extended upto the valley, beyond the property under consideration. BDA may evolve a policy on how the cost for such extended drainage beyond the property under consideration will be met.

5. There may be cases where the valley is ill-defined in a low lying marshy area, part or whole of which might have been categorised as sensitive area. Such cases require greater care while permitting any development. It may be necessary to construct drainage network leading to a nalla or stream before any development is planned.

6. Committee resolved to insist the public to produce certified copy of Revenue Survey Map, Area showing nearest valley portion, Total station survey map showing block levels etc.

7. The BBMP has prepared Master plans regarding Storm Water drains. The Committee may take this into account while making the decisions.

**Suggestions:**

i) BBMP is preparing master plan for secondary & tertiary drain which will be finalised by March 2009.

ii) For all types of primary drains 7.5 Mtr. width, Secondary drains 5 Mtrs. width service road is to be provided within the buffer zone.

(iii) While approving the building plan/ appartment, ground water level is to be ascertained.

(v) Before sanction the Building plan / layout Plan / Group Housing buffer zone area shall be relinquished to competant authority.

(vi) If the water table is very high, no basement floor is allowed.

ಸಂಚಾಲಕರು,
ಉಪಸಮಿತಿ ಸಭೆ ಹಾಗೂ
ನಗರ ಯೋಜಕ ಸದಸ್ಯರು,
ಬೆಂಅಪ್ರಾ, ಬೆಂಗಳೂರು.

14.3.09
ಅಧ್ಯಕ್ಷರು,
ಉಪಸಮಿತಿ ಸಭೆ ಹಾಗೂ
ಆಯುಕ್ತರು,
ಬೆಂಅಪ್ರಾ, ಬೆಂಗಳೂರು

## ದಿನಾಂಕ 03-03-2009 ರಂದು ಬೆಳಗ್ಗೆ 11-00 ಘಂಟೆಗೆ ಪ್ರಾಧಿಕಾರದ ಸಭಾಂಗಣದಲ್ಲಿ ಜರುಗಿದ Sensitive Zone ಉಪ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರುಗಳುঃ**

1. ಶ್ರೀ ಸಿದ್ದಯ್ಯ ಐಎಎಸ್, ಅಧ್ಯಕ್ಷರು ಉಪಸಮಿತಿ ಹಾಗೂ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ಶ್ರೀ ಎಸ್.ಬಿ. ಹೊನ್ನರು, ಹೆಚ್ಚುವರಿ ನಿರ್ದೇಶಕರು, ಬಿ.ಎಂ.ಆರ್.ಡಿ.ಎ. ಬೆಂಗಳೂರು.
3. ನಗರ ಯೋಜನಾ ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು ಇವರ ಪರವಾಗಿ ಶ್ರೀ ಎನ್.ಕೆ. ತಿಪ್ಪೆಸ್ವಾಮಿ, ಜಂಟಿ ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
4. ಶ್ರೀ ಬಿ.ಎಂ. ತಿರುಕನಗೌಡರ್, ಜಂಟ್ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಶ್ರೀ ಎಸ್.ಬಿ. ಸಿದ್ದಗಂಗಪ್ಪ ಮುಖ್ಯ ಅಭಿಯಂತರರು, BBMP (Incharge of Storm Water Drain), ಬೆಂಗಳೂರು. 9480684115
6. ಶ್ರೀ ಶ್ರೀನಿವಾಸ್ ಅಭಿಯಂತರ ಸದಸ್ಯರು, ಬೆಂಅಪ್ರಾ, ಬೆಂಗಳೂರು.
7. ಪ್ರೊ|| ಎಂ.ಎಸ್.ಮೋಹನ್ ಕುಮಾರ್, ಸಿವಿಲ್ ಇಂಜನಿಯರಿಂಗ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು.
8. ಶ್ರೀ ಎ.ವಿ. ರಂಗೇಶ್, ಸಂಚಾಲಕರು ಹಾಗೂ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.
9. ಶ್ರೀ ಆಕಾಶ್, M/s Sky Group, ಬೆಂಗಳೂರು.

**ಗೈರು ಹಾಜರಿದ್ದ ಸದಸ್ಯರುಗಳುঃ**

1. ಪ್ರೊ|| ಕೆ. ಶ್ರೀಧರನ್, ಹೈಡ್ರಾಲಜಿ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು.

ದಿನಾಂಕ 31-01-2009ರಂದು ಜರುಗಿದ Sensitive ಉಪ ಸಮಿತಿ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸಲಾಯಿತು.

ಅಧ್ಯಕ್ಷರು ಉಪಸ್ಥಿತರಿದ್ದ ಸದಸ್ಯರನ್ನು ಸಭೆಗೆ ಸ್ವಾಗತಿಸುತ್ತಾ ಕಾರ್ಯ ಸೂಚಿಯಲ್ಲಿದ್ದ ವಿಷಯಗಳನ್ನು "Sensitive Zone" ಗೆ ಸಂಬಂಧಿಸಿದಂತೆ ತಯಾರಿಸಿದ "Guide Line" ಗಳಿಗೆ ಅನುಗುಣವಾಗಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡರು.

**ವಿಷಯ ಸಂಖ್ಯೆ ಃ 01/2009.**

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಪಟ್ಟಣಗೆರೆ ಗ್ರಾಮದ ಸರ್ವೆ ನಂ. 29(ಭಾಗ) ಮತ್ತು 31 ರಲ್ಲಿನ ಒಟ್ಟು 09 ಎಕರೆ 28 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಭೂ ಪರಿವರ್ತನೆ ಆದೇಶದ ಸಂಬಂಧ ಕೈಗಾರಿಕಾ ಉದ್ದೇಶಕ್ಕಾಗಿ ಕರಡು ಕೈಗಾರಿಕಾ ಅಭಿವೃದ್ಧಿ ನಕ್ಷೆ ಅನುಮೋದಿಸುವಂತೆ ಮೆಃ ಟ್ಯಾಂಗಿನ್ ಡೆವಲಪ್‌ಮೆಂಟ್ಸ್ ಲಿ, ಪರವಾಗಿ ಶ್ರೀ. ನಿತಿನ್ ಭಾಗಮನೆ, ಡೈರೆಕ್ಟರ್ ಇವರು ಕೋರಿರುವ ಬಗ್ಗೆ. 70 DC

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಲಾಯಿತು. ಪ್ರಶ್ನಿತ ಪ್ರದೇಶಕ್ಕೆ Total Station Survey ಮಾಡಿ ನಕ್ಷೆ ಸಲ್ಲಿಸಲು ತಿಳಿಸಲಾಗಿತ್ತು, ಆದರೆ ಅರ್ಜಿದಾರರು ಕೇವಲ ಪ್ರಸ್ತಾಪಿತ ಜಾಗದ Topo Plan ಅನ್ನು ತಯಾರಿಸಿ ಸಲ್ಲಿಸಿರುವುದನ್ನು ಸಭೆಯು ಗಮನಿಸಿತು. ಚರ್ಚೆಯ ನಂತರ ಈ ಕೆಳಕಂಡ ಷರತ್ತುಗಳೊಂದಿಗೆ ಭೂ ಪರಿವರ್ತನಾ ಆದೇಶದ ಸಂಬಂಧ ಕರಡು ಕೈಗಾರಿಕಾ ಅಭಿವೃದ್ಧಿ ನಕ್ಷೆಯನ್ನು ಅನುಮೋದಿಸಲು ತೀರ್ಮಾನಿಸಲಾಯಿತು.

1. ಅಂತಿಮವಾಗಿ ಕೈಗಾರಿಕಾ ಅಭಿವೃದ್ಧಿ ನಕ್ಷೆ ಅನುಮೋದನೆ ನೀಡುವ ಮುನ್ನ ಅರ್ಜಿದಾರರಿಂದ Total Station Survey ಮಾಡಿದ ನಕ್ಷೆ ಪಡೆಯುವುದು.
2. ವೃಷಭಾವತಿ ವ್ಯಾಲಿಯವರೆಗೆ ಮಳೆ ನೀರನ್ನು Drainout ಮಾಡಲು ಸೂಕ್ತ ಅವಕಾಶ ಕಲ್ಪಿಸಲು ತಿಳಿಸುವುದು.
3. ಭೂ ಪರಿವರ್ತನೆ ಸಂಬಂಧ ಕರಡು ಅಭಿವೃದ್ಧಿ ನಕ್ಷೆಯನ್ನು ಷರತ್ತಿನೊಂದಿಗೆ ಅನುಮೋದಿಸುವುದು ಹಾಗೂ ಜಿಲ್ಲಾಧಿಕಾರಿಗಳಿಗೆ ಭೂ ಪರಿವರ್ತನೆಗಾಗಿ ತಿಳಿಸುವುದು.
4. ಪ್ರಸ್ತಾಪಿತ ಪ್ರಕರಣದಲ್ಲಿ ಅಂತಿಮವಾಗಿ ಅನುಮೋದನೆಗಾಗಿ ಪ್ರಾಧಿಕಾರದ ಸಮಿತಿ ಸಭೆಯ ಮುಂದೆ ಮಂಡಿಸಿ ತೀರ್ಮಾನ ಕೈಗೊಳ್ಳುವುದು.

**ವಿಷಯ ಸಂಖ್ಯೆ : 02/2009.**

**ವಿಷಯ:** ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಕೋಡಿಗೆಹಳ್ಳಿ ಗ್ರಾಮದ ಸರ್ವೆ ನಂ. 159 ಮತ್ತು 160 ರಲ್ಲಿನ 12191.50 ಚ.ಮೀ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಏಕ ನಿವೇಶನ ಬಡಾವಣೆ ನಕ್ಷೆ ಅನುಮೋದಿಸುವ ಬಗ್ಗೆ.

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಿ, ಈ ಕೆಳಕಂಡ ಷರತ್ತುಗೊಳಪಡಿಸಿ ನಿರ್ಣಯಿಸಲು ತೀರ್ಮಾನಿಸಲಾಯಿತು.

1. ಅನಧಿಕೃತ ಬಡಾವಣೆಗಳಿಂದ ಬರುವ ನೀರು ಹಾಗೂ ಮಳೆ ನೀರನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಡ್ರೈನ್‌ನ್ನು ನಿರ್ಮಿಸಲು ತಿಳಿಸುವುದು.
2. ಸ್ವಾಭಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
3. ರೈಲ್ವೆ ಲೈನ್‌ಗೆ ಸಮಾನಂತರವಾಗಿ ಡ್ರೈನ್‌ಅನ್ನು ಹಾಲಿ ಡ್ರೈನ್ ವರೆಗೂ ಮಳೆನೀರು ಸ್ವಾಭಾವಿಕವಾಗಿ ಹರಿದು ಹೋಗಲು ವ್ಯವಸ್ಥೆ ಕಲ್ಪಿಸುವುದು.
4. ಅಂತಿಮವಾಗಿ ಏಕ ನಿವೇಶನ ಬಡಾವಣೆ ನಕ್ಷೆ ಅನುಮೋದನೆ ಸಂಬಂಧ ಸಮಿತಿ ಸಭೆಯ ಮುಂದೆ ಮಂಡಿಸುವುದು.

**ವಿಷಯ ಸಂಖ್ಯೆ : 03/2009.**

**ವಿಷಯ:** ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಹೂಡಿ ಗ್ರಾಮದ ಸರ್ವೆ ನಂ. 119/1 ಮತ್ತು 123/3 ರಲ್ಲಿನ 02 ಎಕರೆ 08 ಗುಂಟೆ ವಿಸ್ತೀರ್ಣದ ಪ್ರದೇಶವನ್ನು Residential Main ಹಾಗೂ Sensitive Zone ಉಪಯೋಗದಿಂದ ವಾಣಿಜ್ಯ (ಹೋಟೆಲ್ ಮತ್ತು ಮಲ್ಟಿಪ್ಲೆಕ್ಸ್) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿರುವ ಬಗ್ಗೆ.

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಿ, ಈ ಕೆಳಕಂಡ ಷರತ್ತುಗೊಳಪಡಿಸಿ ನಿರ್ಣಯಿಸಲು ತೀರ್ಮಾನಿಸಲಾಯಿತು.

1. ಸರ್ವೆ ನಂ. 123 ರಲ್ಲಿ RMP-2015ರಲ್ಲಿ ಗುರುತಿಸಿರುವ Buffer ಅನ್ನು ಕಾಯ್ದಿರಿಸುವ ನಿಬಂಧನೆ ವಿಧಿಸಿ ಭೂ ಉಪಯೋಗ ಬದಲಾವಣೆಯ ಪ್ರಾರಂಭಿಕ ದೃಢೀಕರಣ ಪತ್ರ ನೀಡುವುದು.
2. ಬಫರ್ ಪ್ರದೇಶದಲ್ಲಿ 5ಮೀ ಅಗಲದ ರಸ್ತೆ ಅಳವಡಿಸುವುದು.
3. ಕಟ್ಟಡ ನಕ್ಷೆ ಅನುಮೋದನೆ ಸಂದರ್ಭದಲ್ಲಿ Buffer ಪ್ರದೇಶವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆ/ ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಹಸ್ತಾಂತರಿಸುವುದು.

**ವಿಷಯ ಸಂಖ್ಯೆ : 04/2009.**

**ವಿಷಯಃ** ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಸರ್ವೆ ನಂ. 48/4 ಎ ರಲ್ಲಿನ 2 ಎಕರೆ 20 ಗುಂಟೆ ಜಮೀನಿನಲ್ಲಿ ತಳ + ನೆಲ + ಒಂದು ಅಂತಸ್ತಿನ ಅಪಾರ್ಟ್‌ಮೆಂಟ್ ಕಟ್ಟಡ ನಕ್ಷೆಯನ್ನು ಮೆಃ ಮ್ಯಾಸ್ಸಿ ಇನ್‌ವೆಸ್ಟ್‌ಮೆಂಟ್ ಪ್ರೈ ಲಿ, ಸಂಸ್ಥೆಯ ಪರವಾಗಿ ಶ್ರೀ. ಕುನ್‌ಬಾಲ್ ಆರ್. ಅಮೀನ್, ನಿರ್ದೇಶಕರು ಇವರ ಪರವಾಗಿ ಮಂಜೂರಾತಿ ನೀಡುವ ಸಂಬಂಧ ವಸತಿ ಏಕ ನಿವೇಶನ ಬಡಾವಣೆ ನಕ್ಷೆ ಅನುಮೋದಿಸುವ ಬಗ್ಗೆ.

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಿ, ಉಪ ಸಮಿತಿ ಸಭೆಯ ಸದಸ್ಯರ ಸ್ಥಳ ಪರಿಶೀಲನೆಗಾಗಿ ಮುಂದೂಡಲಾಯಿತು. To be inspected.

**ವಿಷಯ ಸಂಖ್ಯೆ : 05/2009.**

**ವಿಷಯಃ** ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಹರಳೂರು ಗ್ರಾಮದ ಸರ್ವೆ ನಂ. 1/1,2,3,4, 10/1,2, 11, 20/1,3, 23/12,3,4, 24/1,2,3, 25, 26/1,2, 28/1,2,3, 29/1ಬಿ, 29/2,3, 30/1,2,3,4,5ರ ಜಮೀನುಗಳ ಒಟ್ಟು ವಿಸ್ತೀರ್ಣವು 15 ಎಕರೆ 16.5 ಗುಂಟೆ ಪ್ರದೇಶಕ್ಕೆ ಜಮೀನಿನ ಮಾಲೀಕರಾದ ಶ್ರೀ. ಅಸ್ಟಿನ್ ರೋಜ್, ಎರೋಲ್ ಫರ್ನಾಂಡೀಸ್ ಆರ್. ನಾಗರಾಜ್ ಮತ್ತು ಮೆ॥ ಫರ್ನ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಪರ ಜಿ.ಪಿ.ಎ. ದಾರರದ ಮೆ॥ ದಿವ್ಯಶ್ರೀ ರಿಯಲ್ಟರ್ಸ್ (ಬೆಂಗಳೂರು) ಪ್ರೈ ಲಿ, ರವರ ಪರವಾಗಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಅನುಮೋದಿಸಿದ್ದು ಈ ಪೈಕಿ 4 ಎಕರೆ 6.25 ಗುಂಟೆ (Hitech) Sensitive Zone ರಲ್ಲಿನ ಪ್ರದೇಶ ಹಾಗೂ ಈ ಜಮೀನಿಗೆ ಹೊಂದಿಕೊಂಡಂತೆ ಪೂರ್ವಕ್ಕೆ ಇದೇ ಗ್ರಾಮದ ಸರ್ವೆ ನಂ. 14, 17, 18, 21, 22, 27 ಹಾಗೂ 31, 29/1ಎ ರಲ್ಲಿ 10 ಎಕರೆ 21½ ಗುಂಟೆ ಒಟ್ಟಾರೆ 14 ಎಕರೆ 27.75 ಹೈಟೆಕ್ Sensitive ಪ್ರದೇಶವನ್ನು ಸೇರಿಸಿ ವಸತಿ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಬಗ್ಗೆ.

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಿ, ಈ ಕೆಳಕಂಡ ಷರತ್ತುಗೊಳಪಡಿಸಿ ನಿರ್ಣಯಿಸಲು ತೀರ್ಮಾನಿಸಲಾಯಿತು.

1. ಕೊಳಚೆ ನೀರು (Waste Water)ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆ ಕಲ್ಪಿಸ ತಕ್ಕದ್ದು.
2. ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಸಂಬಂಧ ಸಮಿತಿ ಸಭೆಯ ಮುಂದೆ ಮಂಡಿಸುವುದು.

**ವಿಷಯ ಸಂಖ್ಯೆ : 06/2009.**

**ವಿಷಯ:** ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಭೈರತಿ ಗ್ರಾಮದ ಸರ್ವೆ ಸಂಖ್ಯೆ 57/2 ಮತ್ತು 27/3 ರಲ್ಲಿನ 03 ಎಕರೆ ಪ್ರದೇಶವನ್ನು RMP-2015 ರಲ್ಲಿ Sensitive ವಲಯಕ್ಕಾಗಿ ಕಾದಿರಿಸಿರುವ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆ ಅನುಮೋದಿಸಲು ಕೋರಿರುವ ಬಗ್ಗೆ.

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಿ, ಈ ಕೆಳಕಂಡ ಷರತ್ತುಗೊಳಪಡಿಸಿ ನಿರ್ಣಯಿಸಲು ತೀರ್ಮಾನಿಸಲಾಯಿತು.

1. ಅಕ್ಕಪಕ್ಕದ ಬಡಾವಣೆಗಳಿಂದ ಬರುವ ನೀರು ಹಾಗೂ ಮಳೆ ನೀರನ್ನು ಗಮನದಲ್ಲಿಟ್ಟುಕೊಂಡು ಸೂಕ್ತವಾದ ಡ್ರೈನ್‌ನ್ನು ನಿರ್ಮಿಸಲು ತಿಳಿಸುವುದು.
2. ಬಡಾವಣೆ ನಕ್ಷೆ ಅಂತಿಮ ಅನುಮೋದನೆ ಸಂಬಂಧ ಸಮಿತಿ ಸಭೆಯ ಮುಂದೆ ಮಂಡಿಸುವುದು.

**ವಿಷಯ ಸಂಖ್ಯೆ : 07/2009.**

**ವಿಷಯ:** ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ರಾಮಗೊಂಡನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 54/2 ರಲ್ಲಿನ 02 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ವಸತಿಯೇತರ ಏಕ ನಿವೇಶನ ಅನುಮೋದನೆ ಬಗ್ಗೆ.

ಉಪ ಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಪರಿಶೀಲಿಸಿ ಚರ್ಚಿಸಿ, ಈ ಕೆಳಕಂಡ ಷರತ್ತುಗೊಳಪಡಿಸಿ ನಿರ್ಣಯಿಸಲು ತೀರ್ಮಾನಿಸಲಾಯಿತು.

1. ಅವಶ್ಯಕ Buffer ಜಾಗವನ್ನು ಬಿಡತಕ್ಕದ್ದು.
2. ಪ್ರಸ್ತಾವನೆಯನ್ನು ವಸತಿಯೇತರ ಏಕ ನಿವೇಶನ ಬಡಾವಣೆ ನಕ್ಷೆ ಅನುಮೋದನೆ ಎಂದು ಪರಿಗಣಿಸಿ ಸಮಿತಿ ಸಭೆಗೆ ಮಂಡಿಸುವುದು.

ಸಂಚಾಲಕರು, 14/3
ಉಪಸಮಿತಿ ಸಭೆ ಹಾಗೂ
ನಗರ ಯೋಜಕ ಸದಸ್ಯರು,
ಬೆಂಅಪ್ರಾ, ಬೆಂಗಳೂರು.

14.3.09
ಅಧ್ಯಕ್ಷರು,
ಉಪಸಮಿತಿ ಸಭೆ ಹಾಗೂ
ಆಯುಕ್ತರು,
ಬೆಂಅಪ್ರಾ, ಬೆಂಗಳೂರು

# ದಿನಾಂಕ 15-06-2009 ರಂದು ಬೆಳಗ್ಗೆ 11-30 ಘಂಟೆಗೆ ಪ್ರಾಧಿಕಾರದ ಸಭಾಂಗಣದಲ್ಲಿ ಜರುಗಿದ Sensitive Zone ಉಪ ಸಮಿತಿಯ 4 ನೇ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರುಗಳುಃ**

1. ಶ್ರೀ ಸಿದ್ದಯ್ಯ ಐಎಎಸ್, ಅಧ್ಯಕ್ಷರು, ಉಪಸಮಿತಿ ಹಾಗೂ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2. ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ, ನಗರ ಯೋಜನಾ ಇಲಾಖೆ, ಬೆಂಗಳೂರು ಇವರ ಪರವಾಗಿ ಶ್ರೀ ಎನ್.ಕೆ. ತಿಪ್ಪೆಸ್ವಾಮಿ, ಜಂಟಿ ನಿರ್ದೇಶಕರು, ನಗರ ಯೋಜನಾ ಇಲಾಖೆ, ಬೆಂಗಳೂರು.
3. ಶ್ರೀ ಎಸ್.ಬಿ. ಹೊನ್ನರು, ಹೆಚ್ಚುವರಿ ನಗರ ಯೋಜನಾ ನಿರ್ದೇಶಕರು, ಬಿ.ಎಂ.ಆರ್.ಡಿ.ಎ. ಬೆಂಗಳೂರು.
4. ಶ್ರೀ ಶ್ರೀನಿವಾಸ್, ಅಭಿಯಂತರ ಸದಸ್ಯರು, ಬೆಂಅಪ್ರಾ, ಬೆಂಗಳೂರು.
5. ಶ್ರೀ ಎಸ್.ಬಿ. ಸಿದ್ದಗಂಗಪ್ಪ ಮುಖ್ಯ ಅಭಿಯಂತರರು, ಬೃಹತ್ ಬೆಂಗಳೂರು ನಗರ ಪಾಲಿಕೆ (Incharge of Storm Water Drain), ಬೆಂಗಳೂರು.
6. ಪ್ರೊ|| ಕೆ. ಶ್ರೀಧರನ್, ಹೈಡ್ರಾಲಜಿ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು.
7. ಶ್ರೀ ಎಸ್.ಎಸ್. ಟೋಪಗಿ, ಸಂಚಾಲಕರು ಹಾಗೂ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ.

**ಗೈರು ಹಾಜರಿದ್ದ ಸದಸ್ಯರುಗಳುಃ**

1. ಶ್ರೀ ಬಿ.ಎಂ. ತಿರುಕನಗೌಡರ್, ಹೆಚ್ಚುವರಿ ನಗರ ಯೋಜನಾ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
2. ಪ್ರೊ|| ಎಂ.ಎಸ್.ಮೋಹನ್ ಕುಮಾರ್, ಸಿವಿಲ್ ಇಂಜನಿಯರಿಂಗ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು.

**ವಿಶೇಷ ಆಹ್ವಾನಿತರುಃ**

1. ಶ್ರೀ ಆಕಾಶ್, M/s Sky Group, ಬೆಂಗಳೂರು.

ಅಧ್ಯಕ್ಷರು ಉಪಸ್ಥಿತರಿದ್ದ ಸದಸ್ಯರನ್ನು ಸಭೆಗೆ ಸ್ವಾಗತಿಸುತ್ತಾ ಕಾರ್ಯ ಸೂಚಿಯಲ್ಲಿದ್ದ ವಿಷಯಗಳನ್ನು "Sensitive Zone" ಗೆ ಸಂಬಂಧಿಸಿದಂತೆ ತಯಾರಿಸಿದ "Guide Line" ಗಳಿಗೆ ಅನುಗುಣವಾಗಿ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡರು.

ದಿನಾಂಕ 03-03-2009ರಂದು ಜರುಗಿದ Sensitive ಉಪ ಸಮಿತಿಯ 3 ನೇ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ : 08/2009.**

ವಿಷಯಃ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಇವರು ಕೆಂಗೇರಿ ಗ್ರಾಮದ ಸರ್ವೆ ನಂ. 115/3, 116/3 ಮತ್ತು 117/1Dರಲ್ಲಿನ 01 ಎಕರೆ 34 ಗುಂಟೆ ಪ್ರದೇಶಕ್ಕೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಅಭಿಪ್ರಾಯ ನೀಡುವಂತೆ ಕೋರಿರುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಸರ್ವೆ ನಂ. 115/3, 116/3,117/1D ರಲ್ಲಿನ 01 ಎಕರೆ 34 ಗುಂಟೆ ಪ್ರದೇಶದಲ್ಲಿ RMP-2015 ರಲ್ಲಿನ ವ್ಯಾಲಿ ಜೋನ್‌ಗಾಗಿ 01 ಎಕರೆ 09 ಗುಂಟೆ ಜಾಗವು ಬರುತ್ತಿದೆ. ಹೀಗಾಗಿ ಈ ಜಾಗವನ್ನು Buffer ಎಂದು ಕಾಯ್ದಿರಿಸಿ ಉಳಿಕೆ 25 ಗುಂಟೆ ಪ್ರದೇಶವನ್ನು ವಸತಿಗಾಗಿ ಭೂ ಅನ್ಯಕ್ರಾಂತ ಮಾಡುವ ಬಗ್ಗೆ ಪರಿಗಣಿಸಬಹುದೆಂದು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ : 09/2009.**

ವಿಷಯಃಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ದೇವರ ಬೀಸನಹಳ್ಳಿ ಗ್ರಾಮದ ಸರ್ವೆ ನಂ. 49 ಹಾಗೂ ಬೆಳ್ಳಂದೂರು ಅಮ್ಮಾನಿಕೆರೆ ಖಾನೆ ಗ್ರಾಮದ ಸರ್ವೆ ನಂ. 38/2,3,4,5, 7,8,9,10 ರಲ್ಲಿ 07 ಎಕರೆ 02 ಗುಂಟೆ ವಿಸ್ತೀರ್ಣದ ಜಮೀನಿಗೆ ವಾಸದ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ **ಕೆ.ಎನ್. ರಾಜೇಂದ್ರಕುಮಾರ್ ಮತ್ತು ಶಂಕರ ನಾರಾಯಣ** ರವರು ಕೋರಿರುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಸ್ಥಳ ಪರಿಶೀಲನೆಗಾಗಿ ಮುಂದೂಡಲಾಯಿತು.

**ವಿಷಯ ಸಂಖ್ಯೆ : 10/2009.**

ವಿಷಯಃ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರ ಹಳ್ಳಿ ಹೋಬಳಿ, ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂ. 48/6, 7, 8 ರಲ್ಲಿನ ಒಟ್ಟು 01 ಎಕರೆ 01 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಬಡಾವಣೆ ನಕ್ಷೆ ಅನುಮೋದಿಸುವಂತೆ **ಶ್ರೀಮತಿ ಗೌರಮ್ಮ** ರವರು ಕೋರಿರುವ ಬಗ್ಗೆ

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಸಾರ್ವೆ ನಂ. 48/6, 48/7, 48/8 ರಲ್ಲಿನ ಒಟ್ಟು 01 ಎಕರೆ 01 ಗುಂಟೆ ಪ್ರದೇಶದ ಮೇಲೆ HT Line ಹಾದು ಹೋಗುತ್ತಿರುವುದರಿಂದ, HT Line ಕೆಳಗಡೆ ನಿಯಮಾವಳಿಯಂತೆ ಖಾಲಿ ಜಾಗ ಬಿಡಬೇಕೆಂಬ ಷರತ್ತಿಗೆ ಒಳಪಡಿಸಿ ಭೂ ಅನ್ಯಕ್ರಾಂತ ಮಾಡುವ ಬಗ್ಗೆ ಪರಿಗಣಿಸಬಹುದೆಂದು ತೀರ್ಮಾನಿಸಲಾಯಿತು.

000003

**ವಿಷಯ ಸಂಖ್ಯೆ : 11/2009.**

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಸೀಗೇಹಳ್ಳಿ ಗ್ರಾಮದ ಸರ್ವೆ ನಂ. 109 ರಿಂದ 116 ರಲ್ಲಿನ ಒಟ್ಟಾರೆ 42 ಎಕರೆ 13 ಗುಂಟೆ ಪ್ರದೇಶದಲ್ಲಿ **ಮೆಃ ಸ್ಟರ್ಲಿಂಗ್ ಅರ್ಬನ್ ಡೆವಲೆಪ್‌ಮೆಂಟ್‌ನ** ಪರವಾಗಿ ಸಮೂಹ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಮಂಜೂರಾತಿ ಮಾಡುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಚರ್ಚಿಸಲಾಯಿತು. ಸದರಿ ಪ್ರದೇಶಕ್ಕೆ ಈ ಹಿಂದೆಯೇ ಅಂದರೆ 1994 ರಲ್ಲೇ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸಿರುವುದನ್ನು ಸಭೆಯು ಪರಿಶೀಲಿಸಿ, ಸದರಿ ನಕ್ಷೆಯಲ್ಲಿ ಸ್ವತ್ತಿನ ಪಶ್ಚಿಮಕ್ಕೆ Valley ತೋರಿಸಿಲ್ಲದೇ ಇರುವುದನ್ನು ಗಮನಿಸಲಾಯಿತು. ಪ್ರಶ್ನಿತ ಪ್ರದೇಶಕ್ಕೆ ದಿನಾಂಕ 23.04.2008 ರ ಪ್ರಾಧಿಕಾರದ ಸಮಿತಿ ಸಭೆಯಲ್ಲಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸಲು ತೀರ್ಮಾನಿಸಿದ್ದು, ಅರ್ಜಿದಾರರು ಯೋಜನೆಯಲ್ಲಿನ ಉದ್ಯಾನವನ ಹಾಗೂ ಬಯಲು ಜಾಗ ಪ್ರದೇಶಗಳನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವುದರಿಂದ ಸ್ವತ್ತಿನ ಪಶ್ಚಿಮದ ಗಡಿಗೆ ಹೊಂದಿಕೊಂಡಂತೆ ಸರ್ವೆ ನಂ. 13 ರಲ್ಲಿ ಸರ್ಕಾರಿ ಖರಾಬು ಜಮೀನು ಇರುವುದರಿಂದ ಹಾಗೂ RMP-2015 ರಂತೆ Secondary Valley ತೋರಿಸಿದ್ದು, ಅರ್ಜಿದಾರರ ಜಮೀನಿನಲ್ಲಿ (ಪಶ್ಚಿಮಕ್ಕೆ) 15 ಮೀ. buffer line ಗುರ್ತಿಸಿ, ಇದರಲ್ಲಿ ಅರ್ಜಿದಾರರೇ ಅವರ ಸ್ವಂತ ಖರ್ಚಿನಲ್ಲಿ ಕೆರೆಯ ನೀರಿನ ಹೊರ ಹರಿವಿಗಾಗಿ ಅಡ್ಡಿಯುಂಟಾಗದಂತೆ ಕ್ರಮವಹಿಸಲು ಹಾಗೂ ಬಫರ್ ಜಾಗದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳಬಾರದೆಂಬ ಷರತ್ತು ವಿಧಿಸಿ ಅಭಿವೃದ್ಧಿ ಯೋಜನಾ ನಕ್ಷೆ ಬಿಡುಗಡೆಗೊಳಿಸಲು ತೀರ್ಮಾನಿಸಲಾಯಿತು.

**ವಿಷಯ ಸಂಖ್ಯೆ : 12/2009.**

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಪಟ್ಟಣಗೆರೆ ಗ್ರಾಮದ ಸರ್ವೆ ನಂ. 53 ರಲ್ಲಿನ 02 ಎಕರೆ 05 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ಬಡಾವಣೆ ನಕ್ಷೆಯನ್ನು ಅನುಮೋದಿಸುವಂತೆ **ಶ್ರೀ ಜಿ.ಆರ್. ಬೈರೇಶ್** ರವರು ಕೋರಿರುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಉದ್ದೇಶಿತ ಪ್ರದೇಶವು ಸಮತಟ್ಟಾಗಿದ್ದು , ವೃಷಭಾವತಿ ವ್ಯಾಲಿ ಪಕ್ಕದಲ್ಲಿರುತ್ತದೆ. ಹೀಗಾಗಿ ವ್ಯಾಲಿ ಮದ್ಯದಿಂದ 50ಮೀ. Buffer Zone ಗಾಗಿ ಕಾಯ್ದಿರಿಸಿ ಮತ್ತು 02 ಗುಂಟೆ ಖರಾಬು ಜಾಗವನ್ನು ಹೊರತುಪಡಿಸಿ ಅಗತ್ಯ ಮಾಹಿತಿ : ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ಸಮಿತಿ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

17/06/09
ನಗರ ಯೋಜಕ ಸದಸ್ಯರು,

26.6.09
ಆಯುಕ್ತರು,

## ದಿನಾಂಕ 16-10-2009 ರಂದು ಬೆಳಗ್ಗೆ 11-00 ಘಂಟೆಗೆ ಪ್ರಾಧಿಕಾರದ ಸಭಾಂಗಣದಲ್ಲಿ ಜರುಗಿದ Sensitive Zone ನ ಉಪ ಸಮಿತಿಯ 5 ನೇ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರುಗಳುঃ**

| | |
|---|---|
| 1. | ಶ್ರೀ ಸಿದ್ದಯ್ಯ ಐಎಎಸ್, ಅಧ್ಯಕ್ಷರು, ಉಪಸಮಿತಿ ಹಾಗೂ ಆಯುಕ್ತರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. |
| 2. | ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರ ಪರವಾಗಿ ಶ್ರೀ ಪಿ.ಎನ್. ರಾಮನ್, ನಗರ ಯೋಜನಾ ಸಹಾಯಕ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು. |
| 3. | ಶ್ರೀ ಬಿ.ಎಂ. ತಿರುಕನಗೌಡರ್, ಹೆಚ್ಚುವರಿ ನಿರ್ದೇಶಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. |
| 4. | ಶ್ರೀ ಬಿ. ಮಹೇಂದ್ರ, ಹೆಚ್ಚುವರಿ ನಿರ್ದೇಶಕರು, ಬಿ.ಎಂ.ಆರ್.ಡಿ.ಎ. ಬೆಂಗಳೂರು. |
| 5. | ಶ್ರೀ ಎಸ್.ಬಿ. ಸಿದ್ದಗಂಗಪ್ಪ ಮುಖ್ಯ ಅಭಿಯಂತರರು, BBMP (Incharge of Storm Water Drain), ಬೆಂಗಳೂರು. |
| 6. | ಪ್ರೊ॥ ಎಂ.ಎಸ್.ಮೋಹನ್ ಕುಮಾರ್, ಸಿವಿಲ್ ಇಂಜನಿಯರಿಂಗ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು. |
| 7. | ಶ್ರೀ ಆಕಾಶ್, M/s Sky Group, ಬೆಂಗಳೂರು. |
| 8. | ಶ್ರೀ ಎಸ್.ಎಸ್. ಟೊಪಗಿ, ಸಂಚಾಲಕರು ಹಾಗೂ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ. |

**ಗೈರು ಹಾಜರಿದ್ದ ಸದಸ್ಯರುಗಳುঃ**

| | |
|---|---|
| 9. | ಶ್ರೀ ಶ್ರೀನಿವಾಸ್, ಅಭಿಯಂತರ ಸದಸ್ಯರು, ಬೆಂಅಪ್ರಾ, ಬೆಂಗಳೂರು. |
| 10. | ಪ್ರೊ॥ ಕೆ. ಶ್ರೀಧರನ್, ಹೈಡ್ರಾಲಜಿ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು. |

**ಠರಾವು : 13/2009, ದಿನಾಂಕ 16.10.2009**

ವಿಷಯಃ ಬೆಂಗಳೂರು ಉತ್ತರ ತಾಲ್ಲೂಕು, ಹೆಬ್ಬಾಳು ಗ್ರಾಮದ ಸರ್ವೆ ನಂ. 82/A, 84/1, 85/7, 87/2, 88, 89 ಮತ್ತು 90 ರಲ್ಲಿನ 07 ಎಕರೆ 34 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಉದ್ಯಾನವನ ಉಪಯೋಗದಿಂದ ಸಂಚಾರ-ಸಾರಿಗೆ ಉಪಯೋಗಕ್ಕೆ **ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು** ಭೂ ಉಪಯೋಗ ಬದಲಾವಣೆ ಕೋರಿರುತ್ತಾರೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು ಬೆಂಗಳೂರು ಉತ್ತರ ತಾಲ್ಲೂಕು, ಹೆಬ್ಬಾಳು ಗ್ರಾಮದ ಸರ್ವೆ ನಂ. 82/A, 84/1, 85/7, 87/2, 88, 89 ಮತ್ತು 90 ರಲ್ಲಿನ 07 ಎಕರೆ 34 ಗುಂಟೆ ವಿಸ್ತೀರ್ಣದ ಪ್ರದೇಶವು RMP-2015 ರಲ್ಲಿ Traffic and Transportation (Sensitive) ವಲಯದಲ್ಲಿರುವುದನ್ನು ಗಮನಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. Buffer ಪ್ರದೇಶದಲ್ಲಿ 5 ಮೀ. ಅಗಲದ ರಸ್ತೆ ಅಳವಡಿಸುವುದು.
3. ಸದರಿ ಪ್ರದೇಶವು ಕೆರೆಯ ಪಕ್ಕದಲ್ಲಿದ್ದು ತಗ್ಗು ಪ್ರದೇಶವಾಗಿರುವುದರಿಂದ ತಳಮಹಡಿ ನಿರ್ಮಿಸುವುದು ಸೂಕ್ತವಾಗಿರುವುದಿಲ್ಲ.
4. ಅಭಿವೃದ್ಧಿ ಯೋಜನಾ ನಕ್ಷೆ ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು.
5. ಡ್ರೈನ್ ಮಧ್ಯಭಾಗದಿಂದ 50 ಮೀ. ಪ್ರದೇಶವನ್ನು Buffer ಗಾಗಿ ಕಾಯ್ದಿರಿಸುವುದು.

**ಠರಾವು : 14 / 2009 ದಿನಾಂಕ 16.10.2009**

ವಿಷಯಃ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಸಾದರಮಂಗಲ ಗ್ರಾಮದ ಸರ್ವೆ ನಂ. 9/1 ರಲ್ಲಿನ 28 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಸಾರಿಗೆ ಮತ್ತು ಸಂಪರ್ಕ ಉಪಯೋಗದಿಂದ ವಾಸದ ಉಪಯೋಗಕ್ಕೆ ಶ್ರೀ **ಜೆ. ವೆಂಕಟರಾಮರೆಡ್ಡಿ** ರವರ ಪರವಾಗಿ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ ಹೋಬಳಿ, ಸಾದರಮಂಗಲ ಗ್ರಾಮದ ಸರ್ವೆ ನಂ. 9/1 ರಲ್ಲಿನ 28 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ಸಾರಿಗೆ ಮತ್ತು ಸಂಪರ್ಕ ಉಪಯೋಗದಿಂದ ವಾಸದ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆಗೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ KTCP Act 1961 ರ Section 14-A ರಂತೆ ಕ್ರಮ ಜರುಗಿಸಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು.

**ಠರಾವು : 15 / 2009, ದಿನಾಂಕ 16.10.2009** 000003

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ, ಸಾದರಮಂಗಲ ಗ್ರಾಮದ ಸರ್ವೆ ನಂ. 69/1 ರಲ್ಲಿನ 02 ಎಕರೆ 34 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಏಕನಿವೇಶನ ವಸತಿ ಬಡಾವಣೆ ನಕ್ಷೆ ಅನುಮೋದಿಸುವಂತೆ ಶ್ರೀ **ಕೆ. ಸುಬ್ರಮಣ್ಯ** ರವರು ಕೋರಿರುವ ಬಗ್ಗೆ

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್. ಪುರಂ, ಸಾದರಮಂಗಲ ಗ್ರಾಮದ ಸರ್ವೆ ನಂ. 69/1 ರಲ್ಲಿನ 02ಎಕರೆ 34 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಏಕನಿವೇಶನ ವಸತಿ ಬಡಾವಣೆ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅದರಂತೆ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ಹಾಲಿ ಡ್ರೈವ್ ಮದ್ಯಭಾಗದಿಂದ 25 ಮೀ. ಅಗಲದ Buffer ಅಳವಡಿಸಿ ಸದರಿ Buffer ಪ್ರದೇಶದಲ್ಲಿ 5.00 ಮೀ. ಅಗಲದ ರಸ್ತೆ ಅಳವಡಿಸುವುದು.
3. ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು.
4. ರೈಲ್ವೆ ಲೈನ್‌ಗೆ ಸಮಾನಾಂತರವಾಗಿ ಡ್ರೈನ್ ಅನ್ನು ನಿರ್ಮಿಸಿ, ಹಾಲಿ ಇರುವ ಮೈನ್ ಡ್ರೈನ್ ಗೆ ಮಳೆ ನೀರು ಸ್ವಾಭಾವಿಕವಾಗಿ ಹರಿದುಹೋಗಲು ವ್ಯವಸ್ಥೆ ಕಲ್ಪಿಸುವುದು.

**ಠರಾವು : 16 / 2009, ದಿನಾಂಕ 16.10.2009**

ವಿಷಯ: ಬೆಂಗಳೂರು ನಗರ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 64/1, 64/2 ಮತ್ತು 65 ರಲ್ಲಿನ 03 ಎಕರೆ 32 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಬಹು ವಸತಿ ಕಟ್ಟಡ ನಕ್ಷೆಯನ್ನು ಶ್ರೀ **ಕೆ.ವಿ. ಕೃಷ್ಣಮೂರ್ತಿ ರಾಜು** ರವರು ಅನುಮೋದನೆ ಕೋರಿರುವ ಬಗ್ಗೆ

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ನಗರ ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗಟ್ಟಿಹಳ್ಳಿ ಗ್ರಾಮದ ಸರ್ವೆ ನಂ. 64/1, 64/2 ಮತ್ತು 65 ರಲ್ಲಿನ 03 ಎಕರೆ 32 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಬಹು ವಸತಿ ಕಟ್ಟಡ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅದರಂತೆ ಪ್ರಸ್ತಾವನೆಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ಕೆರೆಯ ಅಂಚಿನಿಂದ 30 ಮೀ. ಅಗಲದ Buffer (No Development Zone) ಅಳವಡಿಸುವುದು.
3. ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು.
4. ಕಟ್ಟಡ ನಕ್ಷೆಯನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು.
5. ಪ್ರಶ್ನಿತ ಪ್ರದೇಶಕ್ಕೆ ಇರುವ ರಸ್ತೆಯ ಬಗ್ಗೆ ನಕ್ಷೆ ಮಂಜೂರಾತಿ ನೀಡುವ ಸಕ್ಷಮ ಪ್ರಾಧಿಕಾರವು ಪರಿಶೀಲಿಸಿಕೊಳ್ಳುವುದು.

**ಠರಾವು : 17 / 2009, ದಿನಾಂಕ 16.10.2009**

**ವಿಷಯ:** ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಅಗ್ರಹಾರ ಗ್ರಾಮದ ಸರ್ವೆ ನಂ. 32, 54/3,4,5 ರಲ್ಲಿನ 09 ಎಕರೆ 27 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ಬಡಾವಣೆ ನಕ್ಷೆ ಅನುಮೋದನೆ ನೀಡುವಂತೆ ಶ್ರೀ **ಹೆಚ್. ಗೋಪಾಲರೆಡ್ಡಿ** ರವರು ಕೋರಿರುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಅಗ್ರಹಾರ ಗ್ರಾಮದ ಸರ್ವೆ ನಂ. 32, 54/3,4,5 ರಲ್ಲಿನ 09 ಎಕರೆ 27 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ಬಡಾವಣೆ ನಕ್ಷೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಸ್ತಾವನೆಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ಸರ್ಕಾರದಿಂದ ಅನುಮೋದನೆಗೊಂಡ RMP-2015 ರಂತೆ ವ್ಯಾಲಿ ಪ್ರದೇಶದಲ್ಲಿ ಡ್ರೈನ್‌ನ ಮಧ್ಯಭಾಗದಿಂದ 25 ಮೀ. ಪ್ರದೇಶವನ್ನು Buffer ಗಾಗಿ ಕಾಯ್ದಿರಿಸುವುದು.
3. ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು.

**ಠರಾವು : 18 / 2009, ದಿನಾಂಕ 16.10.2009**

ವಿಷಯ: ಬೆಂಗಳೂರು ಪೂರ್ವ ತಾಲ್ಲೂಕು, ಬಿದರ ಹಳ್ಳಿ ಹೋಬಳಿ, ಬೈರತಿ ಗ್ರಾಮದ ಸರ್ವೆ ನಂ. 64, 65/1,2, 66, 85 ರಿಂದ 88 ರಲ್ಲಿನ 22 ಎಕರೆ 27 ಗುಂಟೆ ಪ್ರದೇಶವನ್ನು ವಾಸದ ಉದ್ದೇಶದಿಂದ ವಾಣಿಜ್ಯ (ಸಾಫ್ಟ್‌ವೇರ್ ಪಾರ್ಕ್) ಉಪಯೋಗಕ್ಕೆ ಶ್ರೀ **ಕೆ. ನಾಗರಾಜು ಮತ್ತು** ಶ್ರೀ **ಕೆ. ಗೋಪಾಲರಾಜು** ರವರ ಪರವಾಗಿ ಭೂ ಉಪಯೋಗ ಬದಲಾವಣೆ ಮಾಡುವಂತೆ ಕೋರಿರುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ಪೂರ್ವ ತಾಲ್ಲೂಕು, ಬಿದರ ಹಳ್ಳಿ ಹೋಬಳಿ, ಬೈರತಿ ಗ್ರಾಮದ ಸರ್ವೆ ನಂ. 64, 65/1,2, 66, 85 ರಿಂದ 88 ರಲ್ಲಿನ 22 ಎಕರೆ 27 ಗುಂಟೆ ಪ್ರದೇಶವನ್ನು ವಾಸದ ಉದ್ದೇಶದಿಂದ ವಾಣಿಜ್ಯ (ಸಾಫ್ಟ್‌ವೇರ್ ಪಾರ್ಕ್) ಉಪಯೋಗಕ್ಕೆ ಭೂ ಬದಲಾವಣೆ ಸಂಬಂಧ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಅದರಂತೆ ಪ್ರಸ್ತಾವನೆಯನ್ನು ಮುಂದುವರಿಸಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ಸರ್ಕಾರದಿಂದ ಅನುಮೋದನೆಗೊಂಡ RMP-2015 ರಂತೆ ಡ್ರೈನ್ ಇರುವ ಪ್ರದೇಶದಲ್ಲಿ 25 ಮೀ. Buffer ಅಳವಡಿಸುವುದು.
3. ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು.
4. ಸದರಿ ಪ್ರದೇಶದಲ್ಲಿ ಹಾದು ಹೋಗಿರುವ RMP-2015 ರಲ್ಲಿನ Expressway ಗಾಗಿ ಕಾಯ್ದಿರಿಸಿರುವ ಪ್ರದೇಶವನ್ನು ಹೊರತುಪಡಿಸುವುದು.

**ಠರಾವು : 19 / 2009, ದಿನಾಂಕ 16.10.2009**

000005

ವಿಷಯಃ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಕೆಂಗೇರಿ ಗ್ರಾಮದ ಸರ್ವೆ ನಂ. 115/3, 116/3 ಮತ್ತು 117/1Dರಲ್ಲಿನ 01 ಎಕರೆ 34 ಗುಂಟೆ ಪ್ರದೇಶದಲ್ಲಿನ 50 ಮೀಟರ್ buffer ಗಿಂತ ಹೆಚ್ಚಿನ ಜಾಗವು ಅಂದರೆ $\frac{73.15 + 45}{2}$ ಮೀ. ಜಾಗವು ಉದ್ಯಾನವನ ವಲಯದಲ್ಲಿರುವುದರಿಂದ ಇದನ್ನು Buffer ನಲ್ಲಿ ಸೇರಿಸಿಕೊಳ್ಳಬೇಕೆ ಅಥವಾ ಬೇಡವೇ ಎಂಬ ಬಗ್ಗೆ ತೀರ್ಮಾನಿಸುವ ಬಗ್ಗೆ – ಶ್ರೀ ಕೆ.ಟಿ. ನಾಗರಾಜ್ ರವರ ಪರವಾಗಿ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಕೆಂಗೇರಿ ಗ್ರಾಮದ ಸರ್ವೆ ನಂ. 115/3, 116/3 ಮತ್ತು 117/1Dರಲ್ಲಿನ 01 ಎಕರೆ 34 ಗುಂಟೆ ಪ್ರದೇಶಕ್ಕೆ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಅಭಿಪ್ರಾಯ ನೀಡುವಂತೆ ಕೋರಿದ್ದ ಪ್ರಸ್ತಾವನೆಯನ್ನು ದಿನಾಂಕ 15.06.2009 ರಂದು ನಡೆದ ಪ್ರಾಧಿಕಾರದ ಸೆನ್ಸಿಟಿವ್ ವಲಯ ಸಮಿತಿ ಸಭೆಯ ವಿಷಯ ಸಂಖ್ಯೆ 08/2009 ರಲ್ಲಿ ತೀರ್ಮಾನಿಸಿರುವುದನ್ನು ಪುನರ್ ಉಚ್ಚರಿಸಲಾಯಿತು. ಚರ್ಚೆಯ ನಂತರ ಸರ್ವೆ ನಂ. 115/3, 116/3,117/1D ರಲ್ಲಿನ 01 ಎಕರೆ 34 ಗುಂಟೆ ಪ್ರದೇಶದಲ್ಲಿ RMP-2015 ರಲ್ಲಿನ ವ್ಯಾಲಿ ಜೋನ್‌ಗಾಗಿ 01 ಎಕರೆ 09 ಗುಂಟೆ ಜಾಗವು ಬರುತ್ತಿದೆ. ಹೀಗಾಗಿ ಈ ಜಾಗವನ್ನು Buffer ಎಂದು ಕಾಯ್ದಿರಿಸಿ ಉಳಿಕೆ 25ಗುಂಟೆ ಪ್ರದೇಶವನ್ನು ವಸತಿಗಾಗಿ ಭೂ ಅನ್ಯಕ್ರಾಂತ ಮಾಡುವ ಬಗ್ಗೆ ಪರಿಗಣಿಸಬಹುದೆಂದು ಪುನಃ ತೀರ್ಮಾನಿಸಲಾಯಿತು.

**ಠರಾವು : 20 / 2009, ದಿನಾಂಕ 16.10.2009**

ವಿಷಯಃ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಇಬ್ಬಲೂರು ಗ್ರಾಮದ ಸರ್ವೆ ನಂ. 6/1P, 8/1,2,3, 9/1,3, 10/2, 11/2 ರಲ್ಲಿ 56655.55 ಚ.ಮೀ ವಿಸ್ತೀರ್ಣದ ಜಮೀನಿಗೆ ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಇಬ್ಬಲೂರು ಗ್ರಾಮದ ಸರ್ವೆ ನಂ. 6/1P 8/1,2,3, 9/1,3, 10/2, 11/2 ರಲ್ಲಿ 56655.55 ಚ.ಮೀ ವಿಸ್ತೀರ್ಣದ ಜಮೀನಿಗೆ ವಸತಿ ಅಭಿವೃದ್ಧಿ ಯೋಜನೆ ನಕ್ಷೆಯನ್ನು ಈ ಕೆಳಕಂಡಷರತ್ತುಗಳಿಗೆ ಒಳಪಡಿಸಿ ಮುಂದುವರಿಸಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ಕೆರೆಯ ಅಂಚಿನಿಂದ 30 ಮೀ. ಅಗಲದ Buffer (No Development Zone) ಅಳವಡಿಸುವುದು.
3. ಸದರಿ ಪ್ರದೇಶವು ಕೆರೆಯ ಪಕ್ಕದಲ್ಲಿದ್ದು , ಜೌಗು ಪ್ರದೇಶವಾದ್ದರಿಂದ ತಳಮಹಡಿಯನ್ನು ನಿರ್ಮಿಸುವುದು ಸೂಕ್ತವಾಗಿರುವುದಿಲ್ಲ.
4. ಪ್ರಶ್ನಿತ ಪ್ರದೇಶಕ್ಕೆ ಸಾರ್ವಜನಿಕ ರಸ್ತೆಯಿಂದ ಸಂಪರ್ಕವಿರುವ ಬಗ್ಗೆ ಸಂಬಂದಪಟ್ಟ ಸ್ಥಳೀಯ ಸಂಸ್ಥೆಯಿಂದ ನಕ್ಷೆಯೊಂದಿಗೆ ದೃಢೀಕರಣ ಪತ್ರ ಪಡೆಯುವುದು.

000006

**ಠರಾವು : 21 / 2009, ದಿನಾಂಕ 16.10.2009**

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಸರ್ವೆ ನಂ. 16/1 ರಲ್ಲಿನ 03 ಎಕರೆ 38 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಸತಿಯಿಂದ ಕೈಗಾರಿಕೆ (Hi-tech) ಉಪಯೋಗಕ್ಕೆ **ಶ್ರೀ ನಿತಿನ್ ಬಾಗಮಾನೆ, ಡೈರಕ್ಟರ್, ಟ್ಯಾಂಗ್ಲಿನ್ ಡೆವಲಪ್‌ಮೆಂಟ್ ಲಿ.** ರವರ ಪರವಾಗಿ ಭೂ ಉಪಯೋಗ ಬದಲಾವಣೆ ಮಾಡಿಕೊಡುವಂತೆ ಕೋರಿರುವ ಬಗ್ಗೆ.

ಉಪಸಮಿತಿ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯನ್ನು ಕೂಲಂಕುಷವಾಗಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಮೈಲಸಂದ್ರ ಗ್ರಾಮದ ಸರ್ವೆ ನಂ. 16/1 ರಲ್ಲಿನ 03 ಎಕರೆ 38 ಗುಂಟೆ ವಿಸ್ತೀರ್ಣದ ಪ್ರದೇಶವನ್ನು ವಸತಿಯಿಂದ ಕೈಗಾರಿಕೆ (Hi-tech) ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಸಂಬಂಧ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮುಂದಿನ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು.

1. ಸ್ವಾಭಾವಿಕವಾಗಿ ಇಳಿಮಟ್ಟದ ಕಡೆ ಹೋಗುವ ಮಳೆ ನೀರನ್ನು ವ್ಯಾಲಿಗೆ ಡ್ರೈನ್ ಮುಖಾಂತರ ತಂದು ಸೇರಿಸುವುದು ಹಾಗೂ ನೀರು ಸಾರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು.
2. ತಳಮಹಡಿಗೆ ಅನುಮೋದನೆ ನೀಡುವುದು ಸೂಕ್ತವಲ್ಲ.
3. ಡ್ರೈನ್‌ನ ಮಧ್ಯಭಾಗದಿಂದ 25 ಮೀ. ಪ್ರದೇಶವನ್ನು Buffer ಗಾಗಿ ಕಾಯ್ದಿರಿಸುವುದು.
4. ಕಟ್ಟಡ ನಕ್ಷೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು.

ನಗರ ಯೋಜಕ ಸದಸ್ಯರು,

28.10.09
ಆಯುಕ್ತರು.